**ದಿನಾಂಕ: 15-09-2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ** ಪಾಟೀ **ಸವಾಲು:- ಪ್ರತಿವಾದಿಯ** ಪರ **ಶ್ರೀ. ಎಂ.ವಿ.ಎಸ್.** ವಕೀಲರಿಂದ:-

4. ಈ ದಾವೆಯಲ್ಲಿ ಏನೆಂದು ಹೂಡಿರುತ್ತಾರೆ ಎಂದು ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿಯು ತಿಳಿದುಕೊಂಡಿದ್ದೇನೆಂದು ನುಡಿಯುತ್ತಾರೆ. ನೀವು ದಾವೆಯನ್ನು ಹೂಡಿರುವ ಸ್ವತ್ತಿನ ಉತ್ತರಕ್ಕೆ 1ನೇ ಪ್ರತಿವಾದಿಯವರ ಜಮೀನು ಇಲ್ಲ ಎಂದರೆ ಸರಿಯಲ್ಲ. ನೀವು ದಾವೆಯನ್ನು ಹೂಡುವಾಗ ಉತ್ತರಕ್ಕೆ ಹುಲಿನಂಜಯ್ಯ ನವರ ಜಮೀನು ಎಂದು ಬರೆಸಿರುತ್ತೀರೀ ಆದರೆ ಈಗ ಉತ್ತರಕ್ಕೆ 1ನೇ ಪ್ರತಿವಾದಿಯವರ ಜಮೀನು ಎಂದು ಹೇಳುತ್ತಿದ್ದೀರಿ ಈ ಎರಡರಲ್ಲಿ ಯಾವುದು ಸರಿ ಎಂದರೆ ಸಾಕ್ಷಿಯು 1ನೇ ಪ್ರತಿವಾದಿಯವರ ಜಮೀನು ಎಂದು ನುಡಿಯುತ್ತಾರೆ. ಆದರೆ, ನೀವು ನಿಮ್ಮ ದಾವೆಯಲ್ಲಿ ಉತ್ತರಕ್ಕೆ ಹುಲಿನಂಜಯ್ಯ ಹಾಗೂ ಗಂಗಮ್ಮ ನವರ ಜಮೀನು ಎಂದು ಬರೆಸಿರುವುದು ಸುಳ್ಳು ಎಂದರೆ ಸಾಕ್ಷಿಯು ಈ3 ಜನರ ಜಮೀನು ಉತ್ತರಕ್ಕೆ ಇದೆ ಎಂದು ನುಡಿಯುತ್ತಾರೆ.

5.ಉತ್ತರಕ್ಕೆ 1ನೇ ಪ್ರತಿವಾದಿಯವರ ಜಮೀನು ಇದೆ ಎಂದು ಬರೆಸಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ತೊಂದರೆ ಇತ್ತು ಎಂದು ನುಡಿಯುತ್ತಾರೆ. ಯಾವ ತೊಂದರೆ ಇತ್ತು ಎಂದರೆ ಸಾಕ್ಷಿಯು ಉತ್ತರಕ್ಕೆ ನನ್ನ ಮನೆಯೂ ಇತ್ತು, ಪ್ರತಿವಾದಿಗಳು ತೊಂದರೆ ನೀಡುತ್ತಿದ್ದರು ಎಂದು ನುಡಿಯುತ್ತಾರೆ. ನಿಮ್ಮ ದಾವೆಯಲ್ಲಿ ಉತ್ತರಕ್ಕೆ ನಿಮ್ಮ ಜಮೀನು ಇತ್ತು ಎಂದು ಬರೆಸಿರುತ್ತೀರಾ ಎಂದರೆ ಸಾಕ್ಷಿಯು ಬರೆಸಿದ್ದೇನೆ ಎಂದು ನುಡಿಯುತ್ತಾರೆ.

ಪೂರ್ವಕ್ಕೆ ಸರ್ಕಾರಿ ರಸ್ತೆ ಇದೆ ಎಂದರೆ ಸರಿ. ಪಶ್ಚಿಮಕ್ಕೆ ನಿಮ್ಮ ಭಾಗಕ್ಕೆ ಬಂದಂತಹ ಸ್ವತ್ತು ಎಂದರೆ ಸಾಕ್ಷಿಯು ಇಲ್ಲ ಗೌರಮ್ಮನವರ ಜಮೀನು ಎಂದು ನುಡಿಯುತ್ತಾರೆ. ನೀವು ದಾವೆಯನ್ನು ಹೂಡುವಾಗ ಪಶ್ಚಿಮಕ್ಕೆ ಗೌರಮ್ಮನವರ ಜಾಗ ಎಂದು ಬರೆಸಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಪ್ರತಿವಾದಿಗಳೇ ಪಂಚಾಯಿತಿಯಿಂದ ಬರೆಸಿಕೊಂಡು ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ಪಂಚಾಯಿತಿಯಿಂದ ಬರೆಸಿಕೊಂಡು ಬಂದಿರುವುದಕ್ಕೆ ಪೋಲೀಸರಿಗೆ ದೂರು ನೀಡಿರುತ್ತೀರಾ ಎಂದರೆ ಸಾಕ್ಷಿಯು ನೀಡಿದ್ದೇನೆ ಎಂದು ನುಡಿಯುತ್ತಾರೆ.

6. ನೀವು ದಿನಾಂಕಃ29.11.2012ರಂದು ನೀಡಿರುವ ಪಂಚಾಯಿತಿ ಪಾರಿಕತ್ತು ಸರಿ ಇದೆಯಾ ಎಂದರಿ ಸಾಕ್ಷಿಯು ಸರಿ ಇದೆ ಎಂದು ನುಡಿಯುತ್ತಾರೆ. ನಿಪಿ-7 ಪಂಚಾಯಿತಿ ಪಾರಿಕತ್ತು ಸರಿ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರಿದು ನನ್ನ ಹೆಸರಿನಲ್ಲಿ ಖಾತೆ, ಪಹಣಿ , ಇ.ಸಿ, ಕಂದಾಯ ಡಿಮ್ಯಾಂಡ್ ಎಕ್ಸ್ ಟ್ರ್ಯಾಕ್ಟ್ ಇರುತ್ತದೆ ಎಂದು ನುಡಿಯುತ್ತಾರೆ. ನಿಪಿ-7ರಲ್ಲಿ ಇರುವ 2ನೇ ಐಟಂ ಸ್ವತ್ತು ಪಾಳು ನಿಮ್ಮ ಬಾಗಕ್ಕೆ ಬಂದಿರುತ್ತದೆಯಾ ಎಂದರೆ ಸಾಕ್ಷಿಯು ನನ್ನ ಬಾಗಕ್ಕೆ ಬಂದಿಲ್ಲ ಗೌರಮ್ಮನವರ ಬಾಗಕ್ಕೆ ಬಂದಿರುತ್ತದೆ ಎಂದು ನುಡಿಯುತ್ತಾರೆ.

**ಈ ಹಂತದಲ್ಲಿ ಮುಂದುವರೆದ** ಪಾಟೀ **ಸವಾಲಿಗೆ ಪ್ರತಿವಾದಿಯ ಪರ ವಕೀಲರು ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಅ.ಸಿ.ಜ. ಮತ್ತು ಜೆ.ಎಂ.**ಎಫ್.ಸಿ. **ಮಾಗಡಿ.**